*01.03.2018 ನೇ ಸಾಲಿನ ಜೇಷ್ಠತಾ ಪಟ್ಟಿಯ ಆಕ್ಷೇಪಣೆಗಳ ವಿವರ : 28.03.2018*

## 1. ಅರವಳಿಕೆ ಶಾಸ್ತ್ರ ವಿಭಾಗ

| ಕ್ರಮ ಸಂಖ್ಯೆ | ವೈದ್ಯರ ಹೆಸರು, ಪದನಾಮ ಮತ್ತು ವಿಭಾಗ | ಆಕ್ಷೇಪಣೆ ವಿವರ | ದಾಖಲೆಗಳ ಪ್ರಕಾರ ಇರುವ ಸತ್ಯ ಸಂಗತಿ | ನಿರ್ದೇಶಕರ ತೀರ್ಮಾನ/ ಸಮಿತಿ ತೀರ್ಮಾನ |
|---|---|---|---|---|
| 1 | ಡಾ॥ ಸತೀಶ್ ಕುಮಾರ್ ಎಂ.ಎನ್ | PMSSY ಆಸ್ಪತ್ರೆಯ ವೈದ್ಯರುಗಳನ್ನು ಜೇಷ್ಠತಾ ಪಟ್ಟಿಯಲ್ಲಿ ಸೇರಿಸಿರುವ ಬಗ್ಗೆ ಈ ಕೆಳಕಂಡಂತೆ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದ್ದಾರೆ.<br><br>1. ಸದರಿ ವೈದ್ಯರುಗಳ ನೇಮಕಾತಿಯು PMSSY ಆಸ್ಪತ್ರೆಯ ಹುದ್ದೆಗಳಿಗೆ ನೇರವಾಗಿ ನೇಮಕಾತಿಗೊಳಿಸಿರುವುದರಿಂದ ಅವರನ್ನು ಈ ಜೇಷ್ಠತಾ ಪಟ್ಟಿಯಲ್ಲಿ ಸೇರಿಸಿರುವ ಬಗ್ಗೆ.<br>2. 01.01.2016 ರ ಜೇಷ್ಠತಾ ಪಟ್ಟಿಯಲ್ಲಿ ಅವರುಗಳ ಹೆಸರು ಇರುವುದಿಲ್ಲ. ಹಾಗೂ ಅವರುಗಳು BMCRI ಯ ಆಸ್ಪತ್ರೆಗಳಲ್ಲಿ (ವಿಕ್ಟೋರಿಯಾ, ವಾಣಿವಿಲಾಸ್, ಮಿಂಟೋ, ಬೌರಿಂಗ್, ಇಎನ್‌ಟಿ ಆಸ್ಪತ್ರೆ) ಕಾರ್ಯನಿರ್ವಹಿಸಿರುವುದಿಲ್ಲ.<br>3. ಅವರುಗಳಿಗೆ ಯಾವ ಬೋಧಕ ಅನುಭವವೂ ಇರುವುದಿಲ್ಲ. ಆದರೆ ನಾವು ಬೋಧಕ ವೈದ್ಯರುಗಳಾಗಿದ್ದು, ಹಲವರು RGUHS ನ PG GUIDE ಗಳಾಗಿದ್ದಾರೆ. ಸದರಿ ವೈದ್ಯರುಗಳು ನೇಮಕಗೊಂಡಾಗ ಅರವಳಿಕೆ ಶಾಸ್ತ್ರ ವಿಭಾಗದ HOD ರವರ ಬಳಿ ವರದಿ ಮಾಡದೇ PMSSY ಆಸ್ಪತ್ರೆಯಲ್ಲಿ ವರದಿ ಮಾಡಿರುತ್ತಾರೆ. ಅವರ ಸೇವಾಪುಸ್ತಕವು BMCRI ನಲ್ಲಿರುವುದಿಲ್ಲ.<br>4. ಅವರುಗಳು ವೇತನ & ಇತರೆ ಆರ್ಥಿಕ ಸೌಲಭ್ಯಗಳನ್ನು PMSSY ನಿಂದ ಪಡೆದಿರುತ್ತಾರೆ ವಿನಃ BMCRI ನಲ್ಲಿ ಅಲ್ಲ. | 1. ಈ ಸಂಸ್ಥೆಯ ಆದೇಶ ಸಂಖ್ಯೆ: ಬೆಂವೈವಿಸಂಸಂ/ಸಿ(1)/53/12-13 28.08.2012 ರ ಆದೇಶದಲ್ಲಿ<br>1. ಡಾ॥ ನೇತ್ರಾ H.N,<br>2. ಡಾ॥ ರಾಘವೇಂದ್ರ B.S,<br>3. ಡಾ॥ ಸರಸ್ವತಿ S,<br>ಇವರುಗಳು ಈ ಸಂಸ್ಥೆಯಿಂದಲೇ ನೇಮಕಾತಿಗೊಂಡಿರುತ್ತಾರೆ.<br>2. ಬೆಂವೈವಿಸಂಸಂ/ಸಿಬ್ಬಂದಿ(1)/18/2015-16 , dt: 22.09.2015 ರಲ್ಲಿ ಸದರಿ ವೈದ್ಯರುಗಳ ಖಾಯಂ ಪೂರ್ವಸೇವಾವಧಿಯನ್ನು ಈ ಸಂಸ್ಥೆಯಿಂದಲೇ ಘೋಷಿಸಲಾಗಿರುತ್ತದೆ.<br>3. ದಿನಾಂಕ:21.09.2016 ರಂದು ನಡೆದ ಆಡಳಿತ ಪರಿಷತ್ ಸಭೆಯಲ್ಲಿ **"PMSSY ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ಸಹ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ & ಸಂಶೋಧನಾ ಸಂಸ್ಥೆಯ ಅಧಿಕಾರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವುದು ಸೂಕ್ತವಾಗಿರುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಲಾಗಿರುತ್ತದೆ."** | ಈ 3 ವೈದ್ಯರ ಜೇಷ್ಠತೆಯನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP No. 1883-1891/2018 ದಾವೆ ಹೂಡಿರುವುದರಿಂದ ನ್ಯಾಯಾಲಯದ ಅಂತಿಮ ಆದೇಶ ಬರಬೇಕಿದೆ.<br>2018 ರ ಜೇಷ್ಠತಾ ಪಟ್ಟಿಯಲ್ಲಿ ಈ ಅಂಶವನ್ನು ನಮೂದಿಸಲಾಗಿದೆ. |
| 2 | ಡಾ॥ ಸೌಮ್ಯ ರೋ ಹಿತ್ | | | |
| 3 | ಡಾ॥ ಶೋಭಾ ಡಿ | | | |
| 4 | ಡಾ. ಹರ್ಷವರ್ಧನ್ ಹೆಚ್.ಎಸ್ | | | |
| 5 | ಡಾ॥ ಮಧುಮಾಲ ಹೆಚ್.ಆರ್ | | | |

| | | | | |
|---|---|---|---|---|
| | | ಅವರುಗಳು ವಿಶೇಷವಾಗಿ PMSSY ಗೆ ನೇಮಕಗೊಂಡಿರುವುದರಿಂದ ಹಾಗೂ ವೇತನವನ್ನು ಅಲ್ಲಿಯೇ ಪಡೆಯುತ್ತಿರುವುದರಿಂದ ಅವರುಗಳ ಹೆಸರನ್ನು ಜೇಷ್ಠತಾ ಪಟ್ಟಿಯಿಂದ ಹೊರತುಪಡಿಸಿಬೇಕೆಂದು ಕೋರಿರುತ್ತಾರೆ.<br>5. ಅವರುಗಳ PMSSY ಬಿಟ್ಟು ಬೇರೆ ಯಾವ ಆಸ್ಪತ್ರೆಗಳಲ್ಲೂ ಕರ್ತವ್ಯ ನಿರ್ವಹಿಸಿರುವುದಿಲ್ಲವಾದ್ದರಿಂದ ಮತ್ತು ಪತ್ರ ಸಂಖ್ಯೆ: PMSSY/SSH/ SIBBANDI/75/15-16, DT:01.04.2015 ರಲ್ಲಿ PMSSY ನ ಜೇಷ್ಠತಾ ಪಟ್ಟಿಯಲ್ಲಿ ಅವರುಗಳ ಹೆಸರನ್ನು ಸೇರಿಸಿದ್ದು, ಈ ಸಂಸ್ಥೆಯ ಪಟ್ಟಿಯಿಂದ ಅವರುಗಳ ಹೆಸರನ್ನು ಕೈಬಿಟ್ಟು ಅಂತಿಮ ಜೇಷ್ಠತಾ ಪಟ್ಟಿಯನ್ನು ಹೊರಡಿಸಬೇಕೆಂದು ಕೋರಿರುತ್ತಾರೆ.<br>6. ಈ ವಿಷಯದ ಬಗ್ಗೆ ಈಗಾಗಲೇ ಮಾನ್ಯ ಉಚ್ಚನ್ಯಾಯಾಲಯದಲ್ಲಿ WP No. 1883-1891/2018 ರಲ್ಲಿ ಪ್ರಕರಣವನ್ನು ದಾಖಲಿಸಲಾಗಿರುತ್ತದೆ. | | |

28/3

ಮುಖ್ಯ ಆಡಳಿತಾಧಿಕಾರಿಗಳು
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು
*ಸಂಶೋಧನಾ ಸಂಸ್ಥೆ, ಬೆಂಗಳೂರು*

ನಿರ್ದೇಶಕರು ಹಾಗೂ ಡೀನ್
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು
*ಸಂಶೋಧನಾ ಸಂಸ್ಥೆ, ಬೆಂಗಳೂರು*

## 2. ಅಸ್ಥಿಚಿಕಿತ್ಸಾ ವಿಭಾಗ

| ಕ್ರಮ ಸಂಖ್ಯೆ | ವೈದ್ಯರ ಹೆಸರು, ಪದನಾಮ ಮತ್ತು ವಿಭಾಗ | ಆಕ್ಷೇಪಣೆ ವಿವರ | ದಾಖಲೆಗಳ ಪ್ರಕಾರ ಇರುವ ಸತ್ಯ ಸಂಗತಿ | ನಿರ್ದೇಶಕರ ತೀರ್ಮಾನ/ ಸಮಿತಿ ತೀರ್ಮಾನ |
|---|---|---|---|---|
| 1 | ಡಾ. ಲೋಕೇಶ್ ಹೊಳಗುಂದಿ ಸಹಾಯಕ ಪ್ರಾಧ್ಯಾಪಕರು. ಅಸ್ಥಿ ಚಿಕಿತ್ಸಾ ವಿಭಾಗ. | 01.03.2018 ರ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಕ್ರ.ಸಂ 10 ರಲ್ಲಿನ ಡಾ: ಲೋಕೇಶ್ ಹೊಳಗುಂದಿ ಇವರು ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನೇಮಕಗೊಂಡಿದ್ದು, ಇವರ ನೇಮಕಾತಿ ಸಂಬಂಧ ಮಾನ್ಯ ಉಚ್ಚನ್ಯಾಯಾಲಯದಲ್ಲಿ WP No. 7525/2017 ರಲ್ಲಿ ಪ್ರಕರಣವನ್ನು ದಾಖಲಾಗಿದ್ದು, ಸದರಿ ವೈದ್ಯರ ನೇಮಕಾತಿಗೆ ತಡೆಯಾಗಿರುವ ಪತ್ರವನ್ನು ಲಗತ್ತಿಸಿರುತ್ತಾರೆ. ಹಾಗೂ ಸದರಿ ವೈದ್ಯರು ಅಸ್ಥಿ ಚಿಕಿತ್ಸಾ ಶಾಸ್ತ್ರ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ವಿಭಾಗದ ಮುಖ್ಯಸ್ಥರು ಸಲ್ಲಿಸಿರುತ್ತಾರೆ. | ದಾಖಲೆಗಳನ್ನು ಪರಿಶೀಲಿಸಲಾಗಿ, ಡಾ: ಲೋಕೇಶ್ ಹೊಳಗುಂದಿ ಇವರು ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನೇಮಕಗೊಂಡಿದ್ದು, ಇವರ ನೇಮಕಾತಿ ಸಂಬಂಧ ಮಾನ್ಯ ಉಚ್ಚನ್ಯಾಯಾಲಯದಲ್ಲಿ WP No. 7525/2017 ರಲ್ಲಿ ಪ್ರಕರಣವನ್ನು ದಾಖಲಾಗಿದ್ದು, ಸದರಿ ಪ್ರಕರಣವು ಇತ್ಯರ್ಥವಾಗಬೇಕಾಗಿದೆ. | ಡಾ: ಲೋಕೇಶ್ ಹೊಳಗುಂದಿ ಇವರ ಹೆಸರನ್ನು ಜೇಷ್ಠತಾ ಪಟ್ಟಿಯಿಂದ ತೆಗೆಯಲು ತೀರ್ಮಾನಿಸಿದೆ. |

ಮುಖ್ಯ ಆಡಳಿತಾಧಿಕಾರಿಗಳು
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು
*ಸಂಶೋಧನಾ ಸಂಸ್ಥೆ, ಬೆಂಗಳೂರು*

ನಿರ್ದೇಶಕರು ಹಾಗೂ ಡೀನ್
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು
*ಸಂಶೋಧನಾ ಸಂಸ್ಥೆ, ಬೆಂಗಳೂರು*

## 3. ಪೀಡಿಯಾಟ್ರಿಕ್ಸ್ ವಿಭಾಗ

| ಕ್ರಮ ಸಂಖ್ಯೆ | ವೈದ್ಯರ ಹೆಸರು, ಪದನಾಮ ಮತ್ತು ವಿಭಾಗ | ಅಕ್ಷೇಪಣೆ ವಿವರ | ದಾಖಲೆಗಳ ಪ್ರಕಾರ ಇರುವ ಸತ್ಯ ಸಂಗತಿ | ನಿರ್ದೇಶಕರ ತೀರ್ಮಾನ/ ಸಮಿತಿ ತೀರ್ಮಾನ |
|---|---|---|---|---|
| 1 | ಡಾ: ವಿಜಯಲಕ್ಷ್ಮಿ ಗಗನದೀಪ್ ಸಹಾಯಕ ಪ್ರಾಧ್ಯಾಪಕರು. ಪೀಡಿಯಾಟ್ರಿಕ್ಸ್ ವಿಭಾಗ. | 01.03.2018 ರ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಕ್ರ.ಸಂ 01 ರಲ್ಲಿನ ಡಾ: ವಿಜಯಲಕ್ಷ್ಮೀ ಗಗನದೀಪ್, ಪೀಡಿಯಾಟ್ರಿಕ್ಸ್ ವಿಭಾಗ ಇವರು ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ಹೊಂದಿದ ದಿನಾಂಕ:25.05.2009 ಎಂದು ತಪ್ಪಾಗಿ ನಮೂದಾಗಿದ್ದು, ದಿನಾಂಕ:26.08.2008 ಸರಿಯಾದ ದಿನಾಂಕವಾಗಿದ್ದು ಸರಿಪಡಿಸಬೇಕೆಂದು ಕೋರಿರುತ್ತಾರೆ. | ದಾಖಲೆಗಳನ್ನು ಪರಿಶೀಲಿಸಲಾಗಿ,ಡಾ: ವಿಜಯಲಕ್ಷ್ಮೀ ಗಗನದೀಪ್ ಇವರು ಈ ಸಂಸ್ಥೆಗೆ ವಿಲೀನಗೊಂಡ ದಿನಾಂಕದಿಂದಲೇ ಸಹಾಯಕ ಪ್ರಾಧ್ಯಾಪಕರೆಂದು ಪರಿಗಣಿಸಿ ಪುನರ್ ಪದನಾಮೀಕರಿಸಲಾಗಿದೆ. ವೈದ್ಯರ ಸೇವಾ ಜೇಷ್ಠತೆಯ ದಿನಾಂಕವನ್ನು 26.08.2008 ಎಂದು ಪರಿಗಣಿಸಿದೆ. | ಪರಿಗಣಿಸಬಹುದು. |

23/3

ಮುಖ್ಯ ಆಡಳಿತಾಧಿಕಾರಿಗಳು
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು
*ಸಂಶೋಧನಾ ಸಂಸ್ಥೆ, ಬೆಂಗಳೂರು*

ನಿರ್ದೇಶಕರು ಹಾಗೂ ಡೀನ್
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು
*ಸಂಶೋಧನಾ ಸಂಸ್ಥೆ, ಬೆಂಗಳೂರು*

## 4. ವಿಧಿವೈದ್ಯ ಶಾಸ್ತ್ರ ವಿಭಾಗ

| ಕ್ರಮ ಸಂಖ್ಯೆ | ವೈದ್ಯರ ಹೆಸರು, ಪದನಾಮ ಮತ್ತು ವಿಭಾಗ | ಅಕ್ಷೇಪಣೆ ವಿವರ | ದಾಖಲೆಗಳ ಪ್ರಕಾರ ಇರುವ ಸತ್ಯ ಸಂಗತಿ | ನಿರ್ದೇಶಕರ ತೀರ್ಮಾನ/ ಸಮಿತಿ ತೀರ್ಮಾನ |
|---|---|---|---|---|
| 1 | ಡಾ: ಪ್ರದೀಪ್ ಕುಮಾರ್ ಎಂ.ಪಿ ಸಹಾಯಕ ಪ್ರಾಧ್ಯಾಪಕರು. ವಿಧಿವೈದ್ಯ ಶಾಸ್ತ್ರ ವಿಭಾಗ. | ಡಾ: ಪ್ರದೀಪ್ ಕುಮಾರ್ ಎಂ.ಪಿ ಇವರು ದಿ:21.10.2009 ರಂದು ಈ ಸಂಸ್ಥೆಗೆ ತುರ್ತು ಚಿಕಿತ್ಸಾ ವೈದ್ಯಾಧಿಕಾರಿಯಾಗಿ CMO ನೇಮಕಗೊಂಡಿರುತ್ತೇನೆ. ನಂತರ ಈ ಸಂಸ್ಥೆಯಿಂದ NOC ಯನ್ನು ಪಡೆದು ಈ ಸಂಸ್ಥೆಯಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ನೇಮಕಗೊಂಡು ದಿನಾಂಕ:22.02.2012 ರಿಂದ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ದಿನಾಂಕ ತಪ್ಪಾಗಿದ್ದು ಸರಿಪಡಿಸಬೇಕೆಂದು ಕೋರಿರುತ್ತಾರೆ. | ದಾಖಲೆಗಳನ್ನು ಪರಿಶೀಲಿಸಲಾಗಿ, ಡಾ: ಪ್ರದೀಪ್ ಕುಮಾರ್ ಎಂ.ಪಿ ಇವರು ಈ ಹಿಂದೆ ದಿ:21.10.2009 ರಂದು ಈ ಸಂಸ್ಥೆಗೆ ತುರ್ತು ಚಿಕಿತ್ಸಾ ವೈದ್ಯಾಧಿಕಾರಿಯಾಗಿ CMO ನೇಮಕಗೊಂಡು ಕರ್ತವ್ಯನಿರ್ವಹಿಸಿ ನಂತರ ಈ ಸಂಸ್ಥೆಯಿಂದ NOC ಯನ್ನು ಪಡೆದು ಈ ಸಂಸ್ಥೆಯಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಆಯ್ಕೆಯಾದ ಕಾರಣ ತುರ್ತು ಚಿಕಿತ್ಸಾ ವೈದ್ಯಾಧಿಕಾರಿಯಾಗಿ CMO ಹುದ್ದೆಯಿಂದ ಬಿಡುಗಡೆ ಮಾಡಲಾಗಿರುತ್ತದೆ.<br>ದಿನಾಂಕ:22.02.2012 ರಿಂದ ಸಹಾಯಕ ಪ್ರಾಧ್ಯಾಪಕರಾಗಿ ವಿಧಿವೈದ್ಯ ಶಾಸ್ತ್ರ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.<br>ಈ ವೈದ್ಯರು ಈ ಹಿಂದೆ ತುರ್ತು ಚಿಕಿತ್ಸಾ ವೈದ್ಯಾಧಿಕಾರಿಯಾಗಿ CMO ಕರ್ತವ್ಯ ನಿರ್ವಹಿಸಿರುವ ಸೇವಾ ಅವಧಿಯನ್ನು ಸಹಾಯಕ ಪ್ರಾಧ್ಯಾಪಕರ ಹುದ್ದೆಯ ಅವಧಿಯೊಂದಿಗೆ ಪರಿಗಣಿಸಲು ಅವಕಾಶವಿರುವುದಿಲ್ಲ. | CMO ಹುದ್ದೆಯ ಸೇವೆಯನ್ನು ಸಹಾಯಕ ಪ್ರಾಧ್ಯಾಪಕರ ಹುದ್ದೆಯ ದಿನಾಂಕದೊಂದಿಗೆ ಸೇರಿಸಲು ಬರುವುದಿಲ್ಲ. |

28/3

ಮುಖ್ಯ ಆಡಳಿತಾಧಿಕಾರಿಗಳು
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು
*ಸಂಶೋಧನಾ ಸಂಸ್ಥೆ, ಬೆಂಗಳೂರು*

ನಿರ್ದೇಶಕರು ಹಾಗೂ ಡೀನ್
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು
*ಸಂಶೋಧನಾ ಸಂಸ್ಥೆ, ಬೆಂಗಳೂರು*

## 5. ನೇತ್ರಶಾಸ್ತ್ರ ವಿಭಾಗ

| ಕ್ರಮ ಸಂಖ್ಯೆ | ವೈದ್ಯರ ಹೆಸರು, ಪದನಾಮ ಮತ್ತು ವಿಭಾಗ | ಅಕ್ಷೇಪಣೆ ವಿವರ | ದಾಖಲೆಗಳ ಪ್ರಕಾರ ಇರುವ ಸತ್ಯ ಸಂಗತಿ | ನಿರ್ದೇಶಕರ ತೀರ್ಮಾನ/ ಸಮಿತಿ ತೀರ್ಮಾನ |
|---|---|---|---|---|
| 1 | ಡಾ. ಅನುರಾಧ ಎ ಸಹಾಯಕ ಪ್ರಾಧ್ಯಾಪಕರು. ನೇತ್ರಶಾಸ್ತ್ರ ವಿಭಾಗ. | ಡಾ. ಅನುರಾಧ ಎ, ನೇತ್ರಶಾಸ್ತ್ರ ವಿಭಾಗ ಇವರು 01.03.2018 ರ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಕ್ರ.ಸಂ 12 ರಲ್ಲಿದ್ದು, ತಾವು ಈ ಸಂಸ್ಥೆಯಲ್ಲಿ ಈಗಾಗಲೇ 04 ವರ್ಷ ಗುತ್ತಿಗೆಯ ಆಧಾರದ ಮೇಲೆ ಸೀನಿಯರ್ ರೆಸಿಡೆಂಟ್ ಆಗಿ ಕಾರ್ಯನಿರ್ವಹಿಸಿದ್ದು, ಈ ಅನುಭವದ ಅವಧಿಯನ್ನು ಪರಿಗಣಿಸಿ ನೇಮಕಾತಿ ಸಂದರ್ಶನದಲ್ಲಿ ಅಂಕವನ್ನು ನೀಡಿರುವುದಿಲ್ಲ ಹಾಗೂ 2 ನಿಯತಕಾಲಿಕ ಪ್ರಕಟಣೆಗಳನ್ನು ಹೊಂದಿರುವುದರಿಂದ ಮೇಲ್ಕಂಡ ವಿಷಯವನ್ನು ಪರಿಗಣಿಸಿ ತಮ್ಮನ್ನು ಕ್ರ.ಸಂ 5 ರಲ್ಲಿನ ಡಾ: ಶಿಲ್ಪ ವೈ.ಡಿ ಇವರ ಕೆಳಗೆ ಕ್ರ.ಸಂ 6 ರಲ್ಲಿ ಜೇಷ್ಠತೆಯನ್ನು ಇರಿಸಬೇಕೆಂದು ಕೋರಿರುತ್ತಾರೆ. | ದಾಖಲೆಗಳನ್ನು ಪರಿಶೀಲಿಸಲಾಗಿ, ಡಾ. ಅನುರಾಧ ಎ, ಇವರು ಈ ಸಂಸ್ಥೆಯ ನೇತ್ರಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನೇಮಕಗೊಂಡಿದ್ದು, ನೇಮಕಾತಿ ಆದೇಶ ಪತ್ರದಲ್ಲಿ ಕ್ರಮ ಸಂಖ್ಯೆ: 07 ರಲ್ಲಿರುತ್ತಾರೆ. ಅದರಂತೆ ದಿನಾಂಕ:17.01.2017 ರಂದು ಕರ್ತವ್ಯಕ್ಕೆ ವರದಿ ಮಾಡಿರುತ್ತಾರೆ.<br>ಈ ಸಂಸ್ಥೆಯಲ್ಲಿ ಜೇಷ್ಠತಾ ಪಟ್ಟಿಯನ್ನು ಹೊರಡಿಸಲು ವೈದ್ಯರ ನೇಮಕಾತಿ ಆದೇಶದಲ್ಲಿನ ಕ್ರಮ ಸಂಖ್ಯೆಯನ್ನು ಪರಿಗಣಿಸಬೇಕಾಗಿರುತ್ತದೆ. ಗುತ್ತಿಗೆಯ ಆಧಾರದ ಮೇಲೆ ಕಾರ್ಯನಿರ್ವಹಿಸಿರುವ ಅವಧಿಯನ್ನು ಪರಿಗಣಿಸಲು ಸಾಧ್ಯವಿರುವುದಿಲ್ಲ. | ಪರಿಗಣಿಸಲು ಬರುವುದಿಲ್ಲ. |

ಮುಖ್ಯ ಆಡಳಿತಾಧಿಕಾರಿಗಳು
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು
*ಸಂಶೋಧನಾ ಸಂಸ್ಥೆ, ಬೆಂಗಳೂರು*

ನಿರ್ದೇಶಕರು ಹಾಗೂ ಡೀನ್
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು
*ಸಂಶೋಧನಾ ಸಂಸ್ಥೆ, ಬೆಂಗಳೂರು*

## 6 ನೇತ್ರಶಾಸ್ತ್ರ ವಿಭಾಗ

| ಕ್ರಮ ಸಂಖ್ಯೆ | ವೈದ್ಯರ ಹೆಸರು, ಪದನಾಮ ಮತ್ತು ವಿಭಾಗ | ಅಕ್ಷೇಪಣೆ ವಿವರ | ದಾಖಲೆಗಳ ಪ್ರಕಾರ ಇರುವ ಸತ್ಯ ಸಂಗತಿ | ನಿರ್ದೇಶಕರ ತೀರ್ಮಾನ/ ಸಮಿತಿ ತೀರ್ಮಾನ |
|---|---|---|---|---|
| 1 | ಡಾ. ವಿದ್ಯಾದೇವಿ ಎಂ ಸಹಾಯಕ ಪ್ರಾಧ್ಯಾಪಕರು. ನೇತ್ರಶಾಸ್ತ್ರ ವಿಭಾಗ. | ನೇತ್ರಶಾಸ್ತ್ರ ವಿಭಾಗದಲ್ಲಿನ ಸಹ ಪ್ರಾಧ್ಯಾಪಕರಾಗಿರುವ ಡಾ: ವಿಶ್ವನಾಥ್ ಇವರು ದಿನಾಂಕ:06.01.2010 ರಿಂದ ಸೀನಿಯರ್ ರೆಸಿಡೆಂಟ್ ಆಗಿ ಪದೋನ್ನತಿ ಹೊಂದಿ ಕಾರ್ಯನಿರ್ವಹಿಸುತ್ತಿದ್ದು, ಡಾ. ವಿದ್ಯಾದೇವಿ ಎಂ ಆದ ತಾವು ದಿನಾಂಕ:18.08.2008 ರಲ್ಲಿಯೇ ಈ ಸಂಸ್ಥೆಗೆ ಸೀನಿಯರ್ ರೆಸಿಡೆಂಟ್ ಆಗಿ ನೇಮಕಾತಿ ಹೊಂದಿ ಕಾರ್ಯನಿರ್ವಹಿಸುತ್ತಿರುವುದರಿಂದ ಡಾ: ವಿಶ್ವನಾಥ್ ರವರಿಗಿಂತ ಮೇಲೆ ತಮ್ಮ ಜೇಷ್ಠತೆಯನ್ನು ಇರಿಸಬೇಕೆಂದು ಕೋರಿರುತ್ತಾರೆ. | ದಾಖಲೆಗಳನ್ನು ಪರಿಶೀಲಿಸಲಾಗಿ, ಸರ್ಕಾರದ ಆದೇಶ ಪತ್ರ ಸಂಖ್ಯೆ: ಆಕುಕ 395 ಎಂಎಂಸಿ 2007 ದಿ:06.01.2010 ರ ಆದೇಶದಲ್ಲಿ ಡಾ: ವಿಶ್ವನಾಥ್ ಇವರನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಈ ಸಂಸ್ಥೆಯಲ್ಲಿಯೇ ವಿಲೀನಗೊಳಿಸಿ ಆದೇಶಿಸಲಾಗಿದ್ದು, ಹಾಗೂ ಈ ಸಂಸ್ಥೆಯ ಪತ್ರ ಸಂಖ್ಯೆ: ಬೆಂವೈವಿಸಂಸಂ/ಸಿ1/68/2010-11, ದಿ:13.07.2013 ರಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಈ ಸಂಸ್ಥೆಯಲ್ಲಿ ವಿಲೀನಗೊಂಡಿರುವ ವೈದ್ಯರುಗಳನ್ನು ವಿಲೀನಗೊಂಡ ದಿನಾಂಕದಿಂದಲೇ ಅನ್ವಯವಾಗುವಂತೆ ಸಹಾಯಕ ಪ್ರಾಧ್ಯಾಪಕರೆಂದು ಪರಿಗಣಿಸಿ ಆದೇಶಿಸಲಾಗಿರುತ್ತದೆ.<br>ಡಾ. ವಿದ್ಯಾದೇವಿ ಎಂ ಆದ ತಾವು ದಿನಾಂಕ:18.08.2008 ರಲ್ಲಿಯೇ ಈ ಸಂಸ್ಥೆಗೆ ಸೀನಿಯರ್ ರೆಸಿಡೆಂಟ್ ಆಗಿ ನೇಮಕಾತಿ ಹೊಂದಿ ನಂತರ ದಿನಾಂಕ: 01.02.2012 ರಿಂದ ಸಹಾಯಕ ಪ್ರಾಧ್ಯಾಪಕರಾಗಿ ಪದೋನ್ನತಿ ಹೊಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. | ಪರಿಗಣಿಸಲು ಬರುವುದಿಲ್ಲ. |

ಮುಖ್ಯ ಆಡಳಿತಾಧಿಕಾರಿಗಳು
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು
*ಸಂಶೋಧನಾ ಸಂಸ್ಥೆ, ಬೆಂಗಳೂರು*

ನಿರ್ದೇಶಕರು ಹಾಗೂ ಡೀನ್
ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು
*ಸಂಶೋಧನಾ ಸಂಸ್ಥೆ, ಬೆಂಗಳೂರು*

# ದಿನಾಂಕ: 01.03.2018ನೇ ಸಾಲಿನ ಸಹ/ಪ್ರಾಧ್ಯಾಪಕರ ಜೇಷ್ಠತಾ ಪಟ್ಟಿಯ ಆಕ್ಷೇಪಣೆಗಳ ವಿವರ.

ವೈದ್ಯ ಶಾಸ್ತ್ರ ವಿಭಾಗ.

| ಕ್ರಮ ಸಂಖ್ಯೆ | ವೈದ್ಯರ ಹೆಸರು, ಪದನಾಮ ಮತ್ತು ವಿಭಾಗ | ಆಕ್ಷೇಪಣೆ ವಿವರ | ದಾಖಲೆಗಳ ಪ್ರಕಾರ ಇರುವ ಸತ್ಯ ಸಂಗತಿ | | | ನಿರ್ದೇಶಕರ ತೀರ್ಮಾನ/ ಸಮಿತಿ ತೀರ್ಮಾನ |
|---|---|---|---|---|---|---|
| 1 | ಡಾ॥ ಕೆ.ಜಿ. ಪ್ರಕಾಶ್, ಪ್ರಾಧ್ಯಾಪಕರು, ವೈದ್ಯ ಶಾಸ್ತ್ರ ವಿಭಾಗ | ಸದರಿ ವೈದ್ಯರು ದಿನಾಂಕ: 01.03.2018ರ ಜೇಷ್ಠತೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ಪ್ರಕಾರ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸದೇ, ವಿಭಾಗವಾರು ಪ್ರಕಟಿಸಿ ನನ್ನ ಜೇಷ್ಠತೆಯನ್ನು ಡಾ॥ ಅಶೋಕ್. ಎಂ.ಎಲ್ ಇವರ ಜೇಷ್ಠತೆಯನ್ನು ತಮಗಿಂತ ಮೇಲಿರಿಸಿರುವುದನ್ನು ಆಕ್ಷೇಪಿಸಿರುತ್ತಾರೆ. | | ಸಹಾಯಕ ಪ್ರಾಧ್ಯಾಪಕರಾಗಿ ಪದೋನ್ನತಿ ಹೊಂದಿದ ದಿನಾಂಕ | ಸಹ ಪ್ರಾಧ್ಯಾಪಕರಾಗಿ ಪದೋನ್ನತಿ ಹೊಂದಿದ ದಿನಾಂಕ | ಸಹಾಯಕ ಪ್ರಾಧ್ಯಾಪಕರ ವೃಂದಕ್ಕೆ ಡಾ॥ ಕೆ.ಜಿ. ಪ್ರಕಾಶ್ ರವರು ಮೊದಲು ಪದೋನ್ನತಿ ಹೊಂದಿರುವುದರಿಂದ ಸದರಿಯವರ ಜೇಷ್ಠತೆಯನ್ನು ಡಾ॥ ಅಶೊಕ್ ರವರ ಮೇಲೆ ಇರಿಸಲಾಗಿದೆ. |
| | | | ಡಾ॥ ಕೆ.ಜಿ.ಪ್ರಕಾಶ್ | 03.08.2006 | 24.11.2009 | |
| | | | ಡಾ॥ ಅಶೋಕ್. ಎಂ.ಎಲ್ | 28.07.2008 | 25.11.2009 | |
| | | | ಇಬ್ಬರಿಗೂ ಪ್ರಾಧ್ಯಾಪಕ ವೃಂದಕ್ಕೆ ದಿ: 02.04.2016ರಲ್ಲಿ ಪದೋನ್ನತಿ ನೀಡಲಾಗಿದೆ. | | | |

28/3

ಮುಖ್ಯ ಆಡಳಿತಾಧಿಕಾರಿಗಳು,
ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ
ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.

ನಿರ್ದೇಶಕರು ಹಾಗೂ ಡೀನ್
ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ
ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.

## ಕರಳು ಬೇನೆ ಚಿಕಿತ್ಸಾ ಶಾಸ್ತ್ರ ವಿಭಾಗ

| ಕ್ರಮ ಸಂಖ್ಯೆ | ವೈದ್ಯರ ಹೆಸರು, ಪದನಾಮ ಮತ್ತು ವಿಭಾಗ | ಆಕ್ಷೇಪಣೆ ವಿವರ | ದಾಖಲೆಗಳ ಪ್ರಕಾರ ಇರುವ ಸತ್ಯ ಸಂಗತಿ | ನಿರ್ದೇಶಕರ ತೀರ್ಮಾನ/ ಸಮಿತಿ ತೀರ್ಮಾನ |
|---|---|---|---|---|
| 1 | ಡಾ॥ ವಿನಯ್. ಬಿ.ಎನ್, ಸಹ ಪ್ರಾಧ್ಯಾಪಕರು, ಕರಳು ಬೇನೆ ಚಿಕಿತ್ಸಾ ಶಾಸ್ತ್ರ ವಿಭಾಗ | ಸದರಿ ವೈದ್ಯರು ಸಹ ಪ್ರಾಧ್ಯಾಪಕರ ಹುದ್ದೆಯಿಂದ ಪ್ರಾಧ್ಯಾಪಕರ ಹುದ್ದೆಗೆ ಸೇರಿಸಲು ಕೋರಿರುತ್ತಾರೆ. | ದಾಖಲೆಗಳ ಪ್ರಕಾರ ಬೆಂವೈವಿಸಂಸಂ/ ಆಶಾ/236/2016-17, ದಿನಾಂಕ: 21.03.2017 ರಲ್ಲಿ ಸಹ ಪ್ರಾಧ್ಯಾಪಕರ ಹುದ್ದೆಯಿಂದ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿಯನ್ನು ನೀಡಿದೆ. | ಪರಿಗಣಿಸಬಹುದು |

28/3

ಮುಖ್ಯ ಆಡಳಿತಾಧಿಕಾರಿಗಳು,
ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ
ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.

ನಿರ್ದೇಶಕರು ಹಾಗೂ ಡೀನ್
ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ
ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.

## ನರರೋಗ ಶಾಸ್ತ್ರ ವಿಭಾಗ

| ಕ್ರಮ ಸಂಖ್ಯೆ | ವೈದ್ಯರ ಹೆಸರು, ಪದನಾಮ ಮತ್ತು ವಿಭಾಗ | ಆಕ್ಷೇಪಣೆ ವಿವರ | ದಾಖಲೆಗಳ ಪ್ರಕಾರ ಇರುವ ಸತ್ಯ ಸಂಗತಿ | ನಿರ್ದೇಶಕರ ತೀರ್ಮಾನ/ ಸಮಿತಿ ತೀರ್ಮಾನ |
|---|---|---|---|---|
| 1 | ಡಾ॥ ಬಾಲಾಜಿ ಪೈ, ಪ್ರಾಧ್ಯಾಪಕರು, ನರರೋಗ ಶಾಸ್ತ್ರ ವಿಭಾಗ | ಸದರಿ ವೈದ್ಯರು ಈ ಹಿಂದೆ 2001 ರಿಂದ ಎಂ.ಎಸ್.ರಾಮಯ್ಯ ವೈದ್ಯಕೀಯ ಕಾಲ್ಲೇಜಿನಲ್ಲಿ ಸಹ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿ ನಂತರ 2008 ರಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರುತ್ತಾರೆ ಈ ಸೇವಾ ಅವಧಿ ದಿನಾಂಕವನ್ನು ಪ್ರಸ್ತುತ ಈ ಸಂಸ್ಥೆಯ ಜೇಷ್ಠತಾ ಪಟ್ಟಿಯಲ್ಲಿ ಸೇರಿಸಲು ಕೋರಿರುತ್ತಾರೆ. | ದಾಖಲೆಗಳನ್ನು ಪರಿಶೀಲಿಸಲಾಗಿ ದಿನಾಂಕ: 02.11.2009 ರಲ್ಲಿ ಡಾ॥ ಬಾಲಾಜಿ ಪೈ ರವರು ಈ ಸಂಸ್ಥೆಯ ನರರೋಗ ಶಾಸ್ತ್ರ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿ ನೇಮಕಾತಿಗೊಂಡು ಕರ್ತವ್ಯ ನಿರ್ವಹಿಸಿರುತ್ತಾರೆ ನಂತರ ದಿನಾಂಕ: 30.05.2012ರಲ್ಲಿ ಪ್ರಾಧ್ಯಾಪಕರಾಗಿ ಪದೋನ್ನತಿ ಹೊಂದಿದ್ದಾರೆ. | ವೈದ್ಯರು ಈ ಸಂಸ್ಥೆಗೆ ನೇಮಕಾತಿಗೊಳ್ಳುವ ಹಿಂದೆ ಸಲ್ಲಿಸಿರುವ ಯವುದೇ ಸೇವಾ ಅವಧಿಯನ್ನು ಪರಿಗಣಿಸಲು ಬರುವುದಿಲ್ಲ. |

28/3

ಮುಖ್ಯ ಆಡಳಿತಾಧಿಕಾರಿಗಳು,
ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ
ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.

ನಿರ್ದೇಶಕರು ಹಾಗೂ ಡೀನ್
ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ
ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.

## ಅಂಗರಚನಾ ಶಾಸ್ತ್ರ ವಿಭಾಗ

| ಕ್ರಮ ಸಂಖ್ಯೆ | ವೈದ್ಯರ ಹೆಸರು, ಪದನಾಮ ಮತ್ತು ವಿಭಾಗ | ಆಕ್ಷೇಪಣೆ ವಿವರ | ದಾಖಲೆಗಳ ಪ್ರಕಾರ ಇರುವ ಸತ್ಯ ಸಂಗತಿ | ನಿರ್ದೇಶಕರ ತೀರ್ಮಾನ/ ಸಮಿತಿ ತೀರ್ಮಾನ |
|---|---|---|---|---|
| 1 | ಡಾ॥ ಮೀನಾಕ್ಷಿ ಪಾರ್ಥಸಾರಥಿ, ಪ್ರಾಧ್ಯಾಪಕರು, ಅಂಗರಚನಾ ಶಾಸ್ತ್ರ ವಿಭಾಗ. | ಸರ್ಕಾರದ ಆದೇಶ ಸಂಖ್ಯೆ. ಆಕುಕ 87 ಎಂಎಎಲ್ 2000, ದಿನಾಂಕ: 26.3.2000 ರಂದು ಕೆ.ಪಿ.ಎಸ್.ಸಿ ಮೂಲಕ ಉಪನ್ಯಾಸಕರಾಗಿ ನೇಮಕಗೊಂಡು ತದನಂತರ ಆಕುಕ 154 ಎಂಎಂಸಿ 2005, ದಿ: 15.12.2005 ರಂದು ಸಹಾಯಕ ಪ್ರಾಧ್ಯಾಪಕರಾಗಿ ಪದೋನ್ನತಿ ಪಡೆದಿರುತ್ತೇನೆ. ನಂತರ ಬೆಂವೈವಿಸಂಸಂ/ಆಶಾ/410/2013-14, ದಿ: 19.4.2014 ರಂದು ಸಹ ಪ್ರಾಧ್ಯಾಪಕರಾಗಿ ದಿ:4.3.2011 ರಿಂದ ಅನ್ವಯವಾಗುವಂತೆ ಪದೋನ್ನತಿ ನೀಡಲಾಗಿದ್ದು, ತದನಂತರ ದಿನಾಂಕ:14.5.2014ರ ತಿದ್ದುಪಡಿ ಆದೇಶದಂತೆ, 4.3.2011 ರ ಬದಲಾಗಿ 5.10.2012 ಎಂದು ಓದಿಕೊಳ್ಳಲು ಆದೇಶಿಸಿರುತ್ತದೆ. ಬೆಂವೈವಿಸಂಸಂ/ಆಶಾ/126/2016-17, ದಿ: 8.11.2016 ರಲ್ಲಿ ಪ್ರಾಧ್ಯಾಪಕರಾಗಿ ಪದೋನ್ನತಿ ಪಡೆದಿರುತ್ತೇನೆ. ಇವರ ಆಕ್ಷೇಪಣೆಯಲ್ಲಿ ಅಂಗರಚನಾ ಶಾಸ್ತ್ರ ವಿಭಾಗ ಪ್ರಾಧ್ಯಾಪಕರಾಗಿ ಅರ್ಹ ದಿನಾಂಕದಿಂದ ಅಂದರೆ 2010 ರಿಂದಲೇ ಜೇಷ್ಠತೆಯನ್ನು ಪರಿಗಣಿಸಲು ಕೋರಿರುತ್ತಾರೆ. | ನಿಯಮಾನುಸಾರ ಕಾಲಕಾಲಕ್ಕೆ ಅರ್ಹರಾದ ದಿನಾಂಕದಿಂದ ಹುದ್ದೆ ಖಾಲಿ ಇದ್ದಲ್ಲಿ ಪದೋನ್ನತಿಯನ್ನು ನೀಡಲಾಗುತ್ತಿದೆ. ಸದರಿಯವರು 2010 ರಲ್ಲಿ ಇವರ ಜೊತೆ ನೇಮಕಗೊಂಡವರಿಗೆ ಪದೋನ್ನತಿ ನೀಡಲಾಗಿದ್ದು, ಆ ದಿನಾಂಕದಿಂದ ಪ್ರಾಧ್ಯಾಪಕರಾಗಿ ಪರಿಗಣಿಸಲು ಕೋರಿರುತ್ತಾರೆ. ಆದರೆ ಇವರು 08.11.2014 ರಲ್ಲಿ ಪ್ರಾಧ್ಯಾಪಕರಾಗಿ ಪದೋನ್ನತಿ ಹೊಂದಿದ್ದು, ಇವರ ಜೇಷ್ಠತೆಯನ್ನು ಪ್ರಾಧ್ಯಾಪಕರ ವೃಂದಕ್ಕೆ ಪದೋನ್ನತಿ ಹೊಂದಿದ ದಿನಾಂಕದಿಂದ ತಯಾರಿಸಲಾಗಿದ್ದು ಹಾಗೂ ಅವರ ಜೊತೆಯಲ್ಲಿ ನೇಮಕಗೊಂಡ ಸಹೋದ್ಯೋಗಿಗಳಿಗೂ ನಿಯಮಾನುಸಾರ ಪದೋನ್ನತಿಯನ್ನು ನೀಡಲಾಗಿದೆ. ಆದುದರಿಂದ ಇವರ ಆಕ್ಷೇಪಣೆಯನ್ನು ಪರಿಗಣಿಸಲು ಸಾಧ್ಯಾವಿರುವುದಿಲ್ಲ. | ಪರಿಗಣಿಸಲು ಬರುವುದಿಲ್ಲ. |

28/3

ಮುಖ್ಯ ಆಡಳಿತಾಧಿಕಾರಿಗಳು,
ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ
ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.

ನಿರ್ದೇಶಕರು ಹಾಗೂ ಡೀನ್
ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ
ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.

## ಅರವಳಿಕೆ ಶಾಸ್ತ್ರ ವಿಭಾಗ

| ಕ್ರಮ ಸಂಖ್ಯೆ | ವೈದ್ಯರ ಹೆಸರು, ಪದನಾಮ ಮತ್ತು ವಿಭಾಗ | ಆಕ್ಷೇಪಣೆ ವಿವರ | ದಾಖಲೆಗಳ ಪ್ರಕಾರ ಇರುವ ಸತ್ಯ ಸಂಗತಿ | ನಿರ್ದೇಶಕರ ತೀರ್ಮಾನ/ ಸಮಿತಿ ತೀರ್ಮಾನ |
|---|---|---|---|---|
| 1 | ಡಾ|| ದಯಾನಂದ್. ವಿ.ಪಿ, ಸಹ ಪ್ರಾಧ್ಯಾಪಕರು, ಅರವಳಿಕೆ ಶಾಸ್ತ್ರ ವಿಭಾಗ | ಸದರಿಯವರು ತಾವು ಡಾ|| ವಸಂತಕುಮಾರ್ ಜೆ. ರವರಿಗಿಂತ ಮೊದಲಿನಿಂದಲೂ ಈ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಈ ಸಂಸ್ಥೆಯಲ್ಲಿ ವಿಲೀನಗೊಂಡ ದಿನಾಂಕವಾದ 26.12.2008 ರಲ್ಲಿ ಆಗಿರುತ್ತದೆ. ಆದುದರಿಂದ ಡಾ|| ವಸಂತಕುಮಾರ್ ರವರಿಗೆ ಪದೋನ್ನತಿ ನೀಡಿದ ದಿನಾಂಕದಿಂದ ಸದರಿಯವರಿಗೂ ಪದೋನ್ನತಿ ನೀಡಲು ಕೋರಿರುತ್ತಾರೆ. | ಸದರಿ ವೈದ್ಯರು ಸಹ ಪ್ರಾಧ್ಯಾಪಕರಾಗಿರುವುದರಿಂದ ಇವರ ಆಕ್ಷೇಪಣೆ ಪ್ರಾಧ್ಯಾಪಕರ ಜೇಷ್ಠತಾ ಪಟ್ಟಿಗೆ ಸಂಬಂಧಿಸದ ಕಾರಣ ಅನ್ವಯಿಸುವುದಿಲ್ಲ. | ಪರಿಗಣಿಸಲು ಬರುವುದಿಲ್ಲ. |

28/3

ಮುಖ್ಯ ಆಡಳಿತಾಧಿಕಾರಿಗಳು,
ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ
ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.

ನಿರ್ದೇಶಕರು ಹಾಗೂ ಡೀನ್
ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ
ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.